1636 ಹೆ. ಅಚ್ಚುಕಟ್ಟು ಪ್ರದೇಶ ಹೊಂಮದಿರುತ್ತದೆ. ಪ್ರಸ್ತುತ ಹೇಮಾವತಿ ನಾಲೆಯ ಶಾಖಾ ನಾಲೆಯಾದ ತುಮಕೂರು ಶಾಖಾ ನಾಲೆಯ ವ್ಯಾಪ್ತಿಯಲ್ಲಿ ಬರುವ ಕುಣಿಗಲ್ ಕೆರೆಯ ಹೆಚ್ಚುವರಿ ನೀರು ಮಂಗಳಾ ಜಲಶಯಕ್ಕೆ ಸೇರುತ್ತದೆ.

ಈ ಎರಡೂ ಜಲಾಶಯಗಳು ಜಲ ಮೂಲದ ಕೊರತೆ ಅನುಭವಿಸುತ್ತಿದ್ದು, ತುಮಕೂರು ಶಾಖಾ ನಾಲೆ ಹಾಗೂ ನಾಗಮಂಗಲ ಶಾಖಾ ನಾಲೆಯ ಅಚ್ಚುಕಟ್ಟಿನ ಸೀಪೇಜ್ ನೀರಿನಿಂದಾಗಿ ಈ ಕೊರತೆಯನ್ನು ಸರಿದೂಗಿಸಿಕೊಳ್ಳುತ್ತಿವೆ.

ಆದ್ದರಿಂದ, ಮಾರ್ಕೋನಹಳ್ಳೀ ಜಲಾಶಯದಿಂದ ಮಂಗಳಾ ಜಲಾಶಯಕ್ಕೆ ಹಿನ್ನೀರಿನ ಸಂಪರ್ಕ ಕಾಲುವೆ ನಿರ್ಮಾಣ ಮಾಡುವ ಪ್ರಸ್ತಾವನೆಯನ್ನು ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆಯ ಪೂರ್ಣಪ್ರಮಾಣದ ಬಳಕೆಯ ಅನುಷ್ಠಾನವಾದ ನಂತರವೇ ಪರಿಗಣಿಸಬೇಕಾಗುತ್ತದೆ.

ಆ) ನೀರಿನ ಲಭ್ಯತೆ ಹಾಗೂ ತಾಂತ್ರಿಕ ಸಾಧ್ಯ ಸಾಧ್ಯತೆಗಳನ್ನು ಪರಿಶೀಲಿಸಿ, ಈ ಕಾಲುವೆ ನಿರ್ಮಿಸುವ ಬಗ್ಗೆ ಪರಿಶೀಲಿಸಲಾಗುವುದು.

ಹೇಮಾವತಿ ನಾಲಾ

44 (118) ಶ್ರೀ ಬಿ. ಬಿ. ರಾಮಸ್ವಾಮಿ ಗೌಡ (ಕುಣಿಗಲ್):– ಮಾನ್ಯ ಜಲಸಂಪನ್ಮೂಲಗಳ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಕುಣಿಗಲ್ ತಾಲ್ಲೂಕಿನಲ್ಲಿ ಪ್ರಗತಿ ಹಂತದಲ್ಲಿರುವ ಹೇಮಾವತಿ ಮುಖ್ಯ ನಾಲಾ ನಿರ್ಮಾಣ ಕಾಮಗಾರಿಗಳ ಪೈಕಿ 189–190 ಕಿ.ಮೀ. ಮಧ್ಯದ ಕಾಮಗಾರಿಗಳು ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಇರುವ ಸಮಸ್ಯೆಗಳನ್ನು ಪರಿಹರಿಸಿ, ಕಾಮಗಾರಿಗಳನ್ನು ಪುನರ್ ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಬಸವರಾಜ್ ಬೊಮ್ಮಾಯಿ (ಜಲಸಂಪನ್ಮೂಲಗಳ ಸಚಿವರು):–

ಅ) ಕುಣಿಗಲ್ ತಾಲ್ಲೂಕಿನಲ್ಲಿ ಪ್ರಗತಿ ಹಂತದಲ್ಲಿರುವ ಹೇಮಾವತಿ ಮುಖ್ಯ ನಾಲಾ ನಿರ್ಮಾಣ ಕಾಮಗಾರಿಗಳ ಪೈಕಿ 189–190 ಕಿ.ಮೀ. ಮಧ್ಯದ ಕಾಮಗಾರಿಗಳು ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಈ ಕಿ.ಮೀ. ಗಳ ಭೂಸ್ವಾಧೀನ ಅಧಿಸೂಚನೆ ಬಗ್ಗೆ ಕೆಲವು ರೈತರು ಸರ್ಕಾರದ

ವಿರುದ್ಧ ಉಚ್ಚ ನ್ಯಾಯಾಲಯದಲ್ಲಿ ಹೂಡಿದ್ದ ದಾವೆಗಳು ವಜಾಗೊಂಡಿದ್ದು, ನಂತರ ಈ ಭೂ ಸ್ವಾಧೀನ ಅಧಿಸೂಚನೆಗಳನ್ನು ಪ್ರಶ್ನಿಸಿ ಉಚ್ಚ ನ್ಯಾಯಾಲಯದ ವಿಭಾಗ ಪೀಠದ ಮುಂದೆ ಭೂ ಮಾಲೀಕರು ಸಲ್ಲಿಸಿದ್ದ ರಿಟ್ ಅಪೀಲ್‌ನ ತೀರ್ಮ ಸಹಾ ದಿನಾಂಕ 15–06–2009 ರಂದು ಸರ್ಕಾರದ ಪರವಾಗಿ ಬಂದಿರುತ್ತದೆ. ನಂತರ ದಿನಾಂಕ 17–08–2009 ರಂದು ಅವಾರ್ಡ್ ಅನುಮೋದನೆಯಾಗಿತ್ತು.

ಆದರೆ, 2004ರಲ್ಲಿ ಪ್ರಾರಂಭಿಸಿದ ಈ ಭೂ ಸ್ವಾಧೀನ ಪ್ರಕ್ರಿಯೆಯು ಭೂಸ್ವಾಧೀನ ಕಾಯ್ದೆಯಂತೆ ಭೂ ಸ್ವಾಧೀನದ ಅವಧಿ ಮೀರಿರುವುದರಿಂದ ಭೂ ಸ್ವಾಧೀನದ ಪ್ರಕ್ರಿಯೆ ತಡೆ ಹಿಡಿಯುವಂತೆ ಭೂ ಮಾಲೀಕರು ಉಚ್ಚ ನ್ಯಾಯಾಲಯದ ಮೊರೆ ಹೋದ ನಂತರ ರಿಟ್ ಅರ್ಜಿ ಪುರಸ್ಕೃತಗೊಂಡು ಭೂ ಸ್ವಾಧೀನ ಪ್ರಕ್ರಿಯೆಯನ್ನು ಪುನರ್ ಪ್ರಾರಂಭಿಸಲು ಸೂಚಿಸಲಾಗಿರುತ್ತದೆ. ಅದರಂತೆ ಕಿ.ಮೀ. 189 ಹಾಗೂ ಕಿ.ಮೀ. 190ರ ಭೂ ಸ್ವಾಧೀನದ ಪ್ರಕ್ರಿಯೆಯು ಪ್ರಗತಿಯಲ್ಲಿದ್ದು, ಅವಾರ್ಡ್ ಹಂತದಲ್ಲಿರುತ್ತದೆ.

ಕಿ.ಮೀ. 189ರ ಮಣ್ಣು ಅಗೆತದ ಕಾಮಗಾರಿಯು 800 ಮೀನಿಷ್ಟು ಮುಗಿದಿದ್ದು, ಗುತ್ತಿಗೆದಾರರ ಮನವಿಯಂತೆ ಗುತ್ತಿಗೆಯನ್ನು ಯಥಾಸ್ಥಿತಿಯಲ್ಲಿ ಅಂತಿಮಗೊಳಿಸಲಾಗಿದ್ದು, ಬಾಕಿ ಇರುವ 200 ಮೀ ಮಣ್ಣು ಅಗೆತದ ಕೆಲಸವು ಬಿದನಗೆರೆ ಗ್ರಾಮದ ವ್ಯಾಪ್ತಿಯಲ್ಲಿ ಬರುತ್ತಿದ್ದು, ಭೂ ಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡ ನಂತರ ಕಿ.ಮೀ. 189ರ ಉಳಿಕೆ ಕಾಮಗಾರಿಗೆ ಕಾವೇರಿ ನೀರಾವರಿ ನಿಗಮದ ಮೂಲಕ ಟೆಂಡರ್ ಅನ್ನು ಆಹ್ವಾನಿಸಲಾಗುವುದು ಹಾಗೂ ಕಿ.ಮೀ. 190ರ ಮಣ್ಣು ಅಗೆತದ ಕಾಮಗಾರಿಯನ್ನು ಟೆಂಡರ್ ಮುಖಾಂತರ ಗುತ್ತಿಗೆದಾರರಿಗೆ ವಹಿಸಲಾಗಿದ್ದು, ಭೂ ಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡ ಕೂಡಲೇ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಮಾರ್ಕೊನಹಳ್ಳಿ ಮತ್ತು ಮಂಗಳ ಜಲಾಶಯ

45 (120) ಶ್ರೀ ಬಿ. ಬಿ. ರಾಮಸ್ವಾಮಿ ಗೌಡ (ಕುಣಿಗಲ್):– ಮಾನ್ಯ ಜಲಸಂಪನ್ಮೂಲಗಳ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಕುಣಿಗಲ್ ತಾಲ್ಲೂಕು ಮಾರ್ಕೊನಹಳ್ಳಿ ಮತ್ತು ಮಂಗಳ ಜಲಾಶಯಗಳ ನೀರಾವರಿ ಕಾಲುವೆಗಳು ಹೂಳುನಿಂದ ತುಂಬಿದ್ದು ಅಚ್ಚುಕಟ್ಟುದಾರರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;